ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಅನೇಕ ಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲ. ಜಿಲ್ಲಾ ಮಟ್ಟದ ಸಮಿತಿ ಮಾಡತಕ್ಕ ಕೆಲಸಗಳನ್ನು ರಾಜ್ಯಮಟ್ಟಕ್ಕೆ ತೆಗೆದುಕೊಂಡಿದ್ದರಿಂದ ಅವರು ಮಾಡಿದ ನೇಮಕಾತಿಯನ್ನು ಇದು ರದ್ದು ಮಾಡಿದ್ದಾರೆ ಎಂದು ಹೇಳುತ್ತೀನೆ. ರಾಜ್ಯಮಟ್ಟಕ್ಕೆ ತೆಗೆದುಕೊಳ್ಳುವುದಕ್ಕೆ ಮೊದಲೇ ನೇಮಕ ಮಾಡಿದಂತಹ ಸಮಿತಿ ಪಟ್ಟಿ ಮಾಡಿದ್ದರೆ ಅವನ್ನು ಅಂಗೀಕರಿಸುತ್ತೀರಾ ?

2.00 P. M.

ಶ್ರೀ ಎ. ಆರ್. ಬದರಿನಾರಯಣ.—ರಾಜ್ಯ ಮಟ್ಟದ ಸಮಿತಿಯನ್ನು ನೇಮಕ ಮಾಡಿದ್ದರಿಂದ ಜಿಲ್ಲಾ ಮಟ್ಟದ ಸಮಿತಿ ಮಾಡಿದ ಸೆಲೆಕ್ಷನ್ ರದ್ದು ಆಯಿತು, ಅದು ರದ್ದಾದ್ದರಿಂದ ಅದು ಹೊರಟು ಹೋಯಿತು.

ಶ್ರೀ ಎಂ. ವಿ. ಗಾಡಿ.—ಜಿಲ್ಲಾ ಮಟ್ಟದ ನೇಮಕವನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಅದು ಸರಿಯಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳ ವೇಳೆ ಇಲ್ಲಿಗೆ ಮುಗಿಯಿತು.

CALLING ATTENTION TO A MATTER OF URGENT PUBLIC IMPORTANCE.

[*re : Trading in Foodgrains.*]

Sri T. R. SHAMANNA (Fort).—I beg to call the attention of the Minister of State for Food and Civil Supplies to the Government's policy regarding trading in foodgrains.

ಶ್ರೀ ಮತಿ ಇ. ಇ. ವಾಜ್ (ಆಹಾರ ಮತ್ತು ನಾಗರಿಕ ಪೂರೈಕೆ ಇರಾಖೆಯ ರಾಜ್ಯ ಮಂತ್ರಿಗಳು).—ವಾಡಿಕೆಯಂತೆ, ಸರ್ಕಾರದವರು ಸೆಪ್ಟೆಂಬರ್ 1972ರಲ್ಲಿ 72—73ನೆಯ ಫಸಲು ವರ್ಷದ ಬಗ್ಗೆ ತಮ್ಮ ಆಹಾರನೀತಿಯನ್ನು ಪ್ರಕಟಿಸಿದರು. ಈ ನೀತಿಯ ಪ್ರಕಾರ ರಾಜ್ಯದೊಳಗೆ ಬೆಳೆದ ಬತ್ತ ಮತ್ತು ಜೋಳವನ್ನು ಈಗಿನ ಲೆವಿ ಅದೇಶಗಳ ಮೇರೆಗೆ ಮುಂದೆಯೂ ಸಂಗ್ರಹಿಸಿಕೊಳ್ಳಲಾಗುವುದು. ಸಂಗ್ರಹಣದ ಗುರಿ ಕ್ರಮವಾಗಿ 1,25,000 ಟನ್ ಮತ್ತು 75,000 ಟನ್ ವಸೂಲಿ ಬೆಲೆ, ಲೆವಿ ಪ್ರಮಾಣ, ಮಾಫಿ ಮತ್ತು ವಿನಾಯಿತಿ ಪರಿಮಿತಿಗಳು ಮತ್ತು ಸಂಗ್ರಹಣ ಕ್ರಮ—ಇದೆಲ್ಲ ಹಿಂದಿನ ವರ್ಷದಲ್ಲಿದ್ದಂತೆಯೇ ಇರುತ್ತದೆ. ಬತ್ತ, ಜೋಳ ಇವೆರಡನ್ನು, ಭಾರತದ ಫುಡ್ ಕಾರ್ಪೊರೇಷನ್ ಸಂಸ್ಥೆಯು ಸಂಗ್ರಹಿಸುವುದು. ಸಾರ್ವಜನಿಕ ಹಂಚಿಕೆಯ ವ್ಯವಸ್ಥೆಯ ವಿಚಾರದಲ್ಲಿ ಈಗಿನ ಏಪರ್ಾಡೇ ಮುಂದುವರಿಯುವುದು. ಹಾಗಿದ್ದರೂ, ವಿಶೇಷವಾಗಿ ಒಳನಾಡಿನ ಪ್ರದೇಶಗಳಲ್ಲಿ ಅವಶ್ಯವೆಂದು ಕಂಡುಬಂದರೆ ನ್ಯಾಯ ಬೆಲೆಯ ಅಂಗಡಿಗಳನ್ನು ನಿರಾತಂಕವಾಗಿ ತೆರೆಯಲು ಡಿಪ್ಯುಟಿ ಕಮಿಷನರುಗಳು ಕ್ರಮ ಕೈಕೊಳ್ಳುವರು.

ಅಕ್ಟೋಬರ್ 1972ರಲ್ಲಿ ನಡೆದ ಏ. ಐ. ಸಿ. ಸಿ. ಸಭೆಯಲ್ಲಿ ಕೈಕೊಂಡ ನಿರ್ಣಯವನ್ನು ಗಮನಕ್ಕೆ ತೆಗೆದುಕೊಂಡು, ರಾಜ್ಯಸರ್ಕಾರದವರು ಬತ್ತದ, ಅಕ್ಕಿಯ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಬೇಕೆಂದು ನಿರ್ಧರಿಸಿ, ಈ ಉದ್ದೇಶಕ್ಕಾಗಿ ವಿವರವಾದ ಯೋಜನೆಯೊಂದನ್ನು ಭಾರತ ಸರ್ಕಾರದ ಅನುಮೋದನೆಗೆ ಕಳುಹಿಸಲಾಯಿತು. ರಾಜ್ಯಸರ್ಕಾರದವರು ಸೂಚಿಸಿದ ಬತ್ತದ ಖರೀದಿ ಬೆಲೆ ತಾವು ಗೊತ್ತುಪಡಿಸಿದ ಬೆಲೆಗಿಂತ ಬಹಳ ಹೆಚ್ಚೆಂದು ಭಾವಿಸಿದ್ದುದರಿಂದ ಈ ಯೋಜನೆಯನ್ನು ಭಾರತ ಸರ್ಕಾರದವರು ಒಪ್ಪುವ ಸೂಚನೆ ಕಂಡುಬಂದಿರಲಿಲ್ಲ. ಈ ವಿಷಯವನ್ನು ಪರಿಶೀಲಿಸಿ ಅದಕ್ಕಿಂತ ಹಿಂದೆ ನಿರ್ಧರಿಸಿದ್ದ, ಎಂದರೆ ಸೆಪ್ಟೆಂಬರ್ ತಿಂಗಳಲ್ಲಿ ನಿರ್ಧರಿಸಿದ್ದ, ಆಹಾರ ನೀತಿಯನ್ನೇ ಮುಂದುವರಿಸಿಕೊಂಡು ಬರುವುದಾಗಿ ನಿರ್ಧರಿಸಲಾಯಿತು. ಆದರೆ, ಈ ನೀತಿಯಲ್ಲಿ ಮುಂದೆ ಹೇಳುವ ಬದಲಾವಣೆಗಳಿರುತ್ತವೆ :—

1. ಬತ್ತ ಸಂಗ್ರಹದ ಗುರಿಯನ್ನು 1,50,000 ಟನ್ನಿಗೆ ಹೆಚ್ಚಿಸಬೇಕು.

(ಶ್ರೀಮತಿ ಇ. ಇ. ವಾಜ್)

2. ಸಂಗ್ರಹಿಸಿ, ದಾಸ್ತಾನು ಸ್ಥಳಕ್ಕೆ ಒಪ್ಪಿಸಿಕೊಟ್ಟ ಭತ್ಯ ಕ್ವಿಂಟಾಲ್ ಒಂದಕ್ಕೆ ಈಗಿನಂತೆ 50 ಪೈಸೆಯು ಬದಲಾಗಿ ಕ್ವಿಂಟಾಲಿಗೆ 2.50 ರೂಪಾಯಿಯಂತೆ ಬೆಳೆ ಗಾರರಿಗೆ ಗಾಡಿಬಾಡಿಗೆ ಕೊಡಲಾಗುವುದು.

3. ದಪ್ಪಕ್ಕಿಯ ಚಿಲ್ಲರೆ ಮಾರಾಟ ಬೆಲೆಯನ್ನು ಕ್ವಿಂಟಾಲ್ ಒಂದಕ್ಕೆ 103 ರೂ. ಯಿಂದ 100 ರೂ. ಗೆ ಇಳಿಸಲಾಗುವುದು. ಇದರಲ್ಲಿ ಮಾರಾಟ ತೆರಿಗೆ ಮತ್ತು ಸರ್ಚಾರ್ಜು ಸೇರುವುದಿಲ್ಲ.

4. ಸಣ್ಣಕ್ಕಿ, ಸಾದಾ ಸಣ್ಣಕ್ಕಿ, ಸಾದಾ ಅಕ್ಕಿಯ ಮಾರಾಟ ಬೆಲೆಗಳನ್ನು, ಮಾರಾಟ ತೆರಿಗೆ ಮತ್ತು ಸರ್ಚಾರ್ಜು ಹೊರತು, ಕ್ರಮವಾಗಿ ಕ್ವಿಂಟಾಲಿಗೆ 130 ರೂ., ಕ್ವಿಂಟಾಲಿಗೆ 120 ರೂ. ಮತ್ತು ಕ್ವಿಂಟಾಲಿಗೆ 110 ರೂ. ಎಂದು ಗೊತ್ತುಪಡಿಸ ರಾಗುವುದು.

ಈ ಫಸಲು ವರ್ಷದ ಸಂಗ್ರಹ ನೀತಿಯನ್ನು ಹಿಂದಿನ ವರ್ಷದಂತೆ ಮುಂದುವರಿಸಿಕೊಂಡು ಬಂದಿರುವ ಕಾರಣ, ಕಾರ್ಯನೀತಿಯಲ್ಲಿ ಹಠಾತ್ತನೆ ಗುಂಟಾಗುವ ಬದಲಾವಣೆಯಿಂದಾಗಿ ಕಷ್ಟ ಗುಂಟಾಗುತ್ತದೆಂಬ ಭಯಕ್ಕೆ ಅವಕಾಶವಿಲ್ಲ. ಬಳಕೆದಾರರ ಹಿತಾರ್ಥವಾಗಿ, ಈಗಿನ ಸಾರ್ವ ಜನಿಕ ಪಂಚಿಕೆ ಪದ್ಧತಿಯನ್ನು ಸರ್ಕಾರದವರು ವಿಸ್ತರಿಸಿ ಏಕರೂಪಕ್ಕೆ ತರಬಯಸುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.— ಈ ವರ್ಷ ರಾಜ್ಯದ ಅನೇಕ ಭಾಗಗಳಲ್ಲಿ ಬೆಳೆ ಕೆಟ್ಟು ಹೋಗಿರು ವುದರಿಂದ ತಾವು ಪ್ರೊಕ್ಯೂರ್ ಮಾಡತಕ್ಕದ್ದನ್ನು ಒಂದು ಲಕ್ಷ 25 ಸಾವಿರ ಟನ್‌ನಿಂದ ಒಂದು ಲಕ್ಷ 50 ಸಾವಿರಕ್ಕೆ ಹೆಚ್ಚಿಸಿರುವುದು ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ, ಹಾಗೆಯೇ ಜವಾರ್ ಬೆಳೆ ಕೆಟ್ಟು ಹೋಗಿರುವುದರಿಂದ 75 ಸಾವಿರ ಟನ್ ಅನ್ನು ವಸೂಲು ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ತಿಳಿಸುತ್ತೀರಾ ?

ಎರಡನೆಯದಾಗಿ, ಫೈನ್ ಮತ್ತು ಮೀಡಿಯಂ ಅಕ್ಕಿಯ ಬೆಲೆ ಹೆಚ್ಚಿರುವುದರಿಂದ ಕ್ವಾಲಿಟಿ ಏನಾದರೂ ಇಂಪ್ರೂವ್ ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ? ಈ ಬಗ್ಗೆ ವಿವರಣೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಇ. ಇ. ವಾಜ್.— ಮಾನ್ಯ ಸದಸ್ಯರು ಕೆಲವು ಕಡೆ ಬೆಳೆ ಕಡಿಮೆಯಾಗಿದೆ, ಕೆಲವು ಕಡೆ ಕೆಟ್ಟು ಹೋಗಿದೆ ಎಂದು ಹೇಳುತ್ತಿದ್ದಾರೆ. ಪ್ರತಿಯೊಂದು ವಿಲೇಜಿನಲ್ಲಿ ನಮ್ಮ ಅಧಿಕಾರಿಗಳು ಹೋಗಿ ಆಣ್ಪಾರು ಎಷ್ಟು ಬೆಳೆಯಾಗಿದೆ ಎನ್ನುವುದನ್ನು ಪರಿಶೀಲಿಸಿ ಎಷ್ಟರಮಟ್ಟಿಗೆ ಲೆವಿಹಾಕಲಕ್ಕೆ ಆಗುತ್ತದೆ ಅಷ್ಟು ಹಾಕಬಹುದು ಎಂದು ಎಲ್ಲಾ ಪ್ರಯತ್ನ ಮಾಡಿ ನಮ್ಮ ಗುರಿಯನ್ನು ಮುಟ್ಟು ವುದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವುದು ಏನೆಂದರೆ, ಕೊಡುವ ಕಡೆಯಲ್ಲಿ ಕೊಡುವವರು ಇದ್ದಾರೆ ಅವರಿಗೆ ಕೊಡಿ ಎಂದು ಪ್ರೋತ್ಸಾಹ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಆದಷ್ಟು ಬೇಗ ಒಳ್ಳೆಯ ಕ್ವಾಲಿಟಿ ಅಕ್ಕಿಯನ್ನು ಕೊಡುವ ಹಾಗೆ ಏರ್ಪಾಡು ಮಾಡುತ್ತೇವೆ.

ಶ್ರೀ ಕಾಗೋಡು ತಿಮಪ್ಪ.—ಕೇಂದ್ರ ಸರ್ಕಾರವನ್ನು ಒಲಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರಕ್ಕೆ ಆಗದೇ ಹೋಗಿ, ತೆಗೆದುಕೊಂಡಂಥ ತೀರ್ಮಾನದಿಂದ ವಾಪಸ್ ಹೋಗುತ್ತಿದ್ದಾರೆ. ಆವ್ಪರಿಂದ ರೈತರು ತಾವು ಬೆಳೆದಂಥ ಬತ್ತವನ್ನು ಕಡಿಮೆ ದರಕ್ಕೆ ಕೊಡುವ ಪರಿಸ್ಥಿತಿ ಬಂದು ಬಿಟ್ಟಿದೆ. ಸರ್ಕಾರದವರು ತಮ್ಮ ನಿಲುವನ್ನು ಭದ್ರ ಮಾಡಿಕೊಂಡು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ, ಹಿಂದೆ ಮಾಡಿದಂತೆ ಏತಕ್ಕೆ ತೀರ್ಮಾನ ಮಾಡಬಾರದು ಎಂದು ಕೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಆಹಾರ ಧಾನ್ಯದ ಸಗಟು ವ್ಯಾಪಾರವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಏನು ಯೋಜನೆ ಕಳುಹಿಸಿದ್ದೀರಿ, ಆ ಯೋಜನೆಯಲ್ಲಿ ಬತ್ತ ಸಂಗ್ರಹಣೆಗೆ ಹಣ ಜಾಸ್ತಿ ಕೊಡಬೇಕು ಎಂದು ಹೇಳಿದ್ದಾರೆ. ಅದನ್ನು ಕೇಂದ್ರದವರು ಒಪ್ಪಿಕೊಳ್ಳಲಿಲ್ಲ. ಅದರಿಂದ ಇದನ್ನು ಕೈಬಿಟ್ಟಿದ್ದೇವೆ ಎನ್ನುವ ಅರ್ಥದಲ್ಲಿ ಆಹಾರ ಮಂತ್ರಿಗಳು ಮಾತನಾಡಿದ್ದಾರೆ. ಈಗ ಬೆಲೆಯನ್ನು ಏನು ನಿಷ್ಕರ್ಷೆ ಮಾಡಿದ್ದಾರೆ, ಅದನ್ನು ಒಪ್ಪಿಕೊಳ್ಳಲಿಲ್ಲ. ಆದ್ದರಿಂದ ಮೂಲಭೂತ ವಾಗಿ ಆಹಾರ ಧಾನ್ಯದ ಸಗಟು ವ್ಯಾಪಾರ ಮಾಡುವ ತತ್ವದ ಪ್ರಶ್ನೆಯನ್ನು ಬಿಟ್ಟು ಬಿಟ್ಟಿರುವುದು ಸರಿ. ಈ ತತ್ವವನ್ನು ಕಾಂಗ್ರೆಸ್ ಒಪ್ಪಿದ ಮೇಲೆ ಆ ತತ್ವವನ್ನು ಹೇಗೆ ಕೈ ಬಿಟ್ಟು ಕೊಡುತ್ತೀರಿ? ನೀವು ಏನು ಏನು ಹೇಳಿದ್ದೀರಿ ಅದನ್ನು ಮುಂದೆ ಕಾರ್ಯ ರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆಯೇ ? ಎನ್ನುವ ಅನುಮಾನ ಬರುತ್ತದೆ. ಬೆಲೆಗಳು ಜಾಸ್ತಿಯಾಗುವುದಿಲ್ಲವೇ ?

ಶ್ರೀ ಎಚ್. ಡಿ. ದೇವೆಗೌಡ.—ಕೇಂದ್ರ ಸರ್ಕಾರದ ಮನ ಒಲಿಸಿಕೊಳ್ಳುವುದಕ್ಕೆ ನಾಲ್ಕು ಜನ ಮಂತ್ರಿಗಳ ಸವಾರಿ ದೆಹಲಿಗೆ ಹೋಗಿತ್ತು. ಏಷಿಯಾ—72 ನೋಡುವುದಕ್ಕೆ ಹೋಗಿತ್ತೋ ಅಥವಾ ಇದಕ್ಕೋಸ್ಕರ ಹೋಗಿದ್ದರೋ, ಅದರ ಪ್ರತಿಫಲ ಏನು ಆಯಿತು ? ತಾವು ಕೇಂದ್ರ ಸರ್ಕಾರದ ಮನ ಒಲಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಯೇ ಎನ್ನುವುದನ್ನು ದಯವಾಡಿ ಈ ಸಭೆಗೆ ತಿಳಿಸುತ್ತೀರಾ?

† ಶ್ರೀ ಎಂ. ಮೈ. ಘೋರ್ಪಡೆ (ಹಣಕಾಸು ಮಂತ್ರಿಗಳು). —ನಮಗೆ ಗೊತ್ತಿರುವಂತೆ ಲೆವಿ ಸಿಸ್ಟಮ್ ನಮ್ಮ ರಾಜ್ಯದಲ್ಲಿದೆ. ಲೆವಿ ಸಿಸ್ಟಮ್ ಪ್ರಕಾರ ಎಕರೇಜ್ ಬೇಸಿಸ್ ಮೇಲೆ ಇಷ್ಟಿಷ್ಟು ಪ್ರೊಕ್ಯೂರ್ ಮಾಡಬೇಕು ಎನ್ನುವುದನ್ನು ನಿಗಧಿ ಮಾಡಿದಂತೆ ಲೆವಿಯನ್ನು ಸರ್ಕಾರದವರು ತೆಗೆದುಕೊಳ್ಳುತ್ತಿದ್ದಾರೆ ಅದರ ಪ್ರಕಾರ ಒಂದು ಲಕ್ಷ 25 ಸಾವಿರ ಟನ್ ಬತ್ತವನ್ನು ವಸೂಲು ಮಾಡುವ ಟಾರ್ಗೆಟ್ ಇದೆ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಧಾನ್ಯಗಳ ಸಂಗ್ರಹಣೆ ಮಾಡಿದರೆ, ಹೆಚ್ಚು ಪ್ರಮಾಣದಲ್ಲಿ ರೇಷನಿಂಗ್ ಸಿಸ್ಟಂ ಅನ್ನು ಜಾಸ್ತಿ ಮಾಡಲಿಕ್ಕೆ ಸಾಧ್ಯ ಕಾಳು ಕಡಿಮೆ ಇದ್ದರೆ, ರೇಷನಿಂಗ್ ಮಾಡುವುದಕ್ಕಾಗುವುದಿಲ್ಲ. ಅದಕಾರಣ, ಒಂದು ಲಕ್ಷ 25 ಸಾವಿರ ಏನು ಪ್ರಕ್ಯೂರ್‌ಮೆಂಟ್ ಮೂಲಕ ಸಂಗ್ರಹಣೆ ಆಗುತ್ತಿತ್ತೋ ಅದಕ್ಕಿಂತ ಸ್ವಲ್ಪ ಪ್ರಮಾಣವನ್ನು ಜಾಸ್ತಿ ಮಾಡಿ ಎರಡು ಲಕ್ಷ ಐವತ್ತು ಸಾವಿರ ಟನ್ ಅಕ್ಕಿಗೆ, 4 ಲಕ್ಷ ಟನ್ ಪ್ಯಾಡಿಯನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ವಿಚಾರ ಮಾಡಿದರೆ, ರೈತರು ಸ್ವಲ್ಪಮಟ್ಟಿಗೆ ಜಾಸ್ತಿ ಬತ್ತ ಕೊಡಬೇಕಾಗುತ್ತದೆ. ಈ ವಿಚಾರವನ್ನು ಕೇಂದ್ರ ಸರ್ಕಾರದ ಮುಂದೆ, ಸರ್ಕಾರವು ವತಿಯಿಂದ ಇಟ್ಟಿದ್ದು ನಿಜ. ನಿಮಗೆಲ್ಲಾ ಗೊತ್ತಿರುವಂತೆ, ಗೋಧಿಗೆ, ಪ್ರಕ್ಯೂರ್‌ಮೆಂಟ್ ಪ್ರೈಸ್ ಕೊಡುತ್ತಾರೆ, ನಮ್ಮ ವಿಚಾರದಲ್ಲಿ ಅಕ್ಕಿಗೆ, ದಕ್ಷಿಣ ಹಿಂದೂಸ್ಥಾನದಲ್ಲಿ ಬೆರೆ ಜಾಸ್ತಿ ಮಾಡಿದರೆ ರಾಷ್ಟ್ರದಲ್ಲಿ ಬೆಲೆಗಳ ಇನ್‌ಫ್ಲೇಷನ್ ಆಗಿ ಕೆಟ್ಟ ಪರಿಣಾಮವಾಗುವುದಿಲ್ಲ ಎಂದು ನಮ್ಮ ಸರ್ಕಾರದ ವಿಚಾರ ಇದೆ. ಏಕೆಂದರೆ ನಮ್ಮ ವಿಚಾರದ ಪ್ರಕಾರ ರೈತರಿಗೆ ಸ್ವಲ್ಪ ದರ ಜಾಸ್ತಿ ಕೊಟ್ಟರೆ ಅನುಕೂಲ ಎಂಬ ಭಾವನೆ ಇತ್ತು. ಅದರ ಪ್ರಕಾರ ನಮ್ಮ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಿದ್ದೇವೆ. ಕೇಂದ್ರದಿಂದ ಇನ್ನೂ ಸರಿಯಾದ ಜವಾಬು ಬಂದಿಲ್ಲ. ಕೇಂದ್ರದ ಮುಂದೆ ನಮ್ಮ ಅಭಿಪ್ರಾಯವನ್ನು ಮುಂಡಿಸಿದ್ದೇವೆ, ಅವರಿಂದ ಸ್ಪಷ್ಟವಾದ ಉತ್ತರ ಬಂದಿಲ್ಲ, ಒಂದು ಲಕ್ಷ 25 ಸಾವಿರ ಪಲ್ಲ ನಮ್ಮ ಪ್ರೊಕ್ಯೂರ್‌ಮೆಂಟ್ ಟಾರ್ಜೆಟ್. ಅದಷ್ಟು ಮಟ್ಟಿಗೆ ಹೆಚ್ಚಿಗೆ ದೊರೆಯುವ ಧಾನ್ಯವನ್ನು ಅಂದರೆ ಬತ್ತವನ್ನು ಶೇಖರಿಸಿ ರೇಷನ್ ಜಾಸ್ತಿ ಮಾಡಬೇಕೆಂಬುದು ನಮ್ಮ ಉದ್ದೇಶವಾಗಿದೆ. ಮಾರ್ಕೆಟ್‌ಬಲ್ ಸರ್ಪ್ಲಸ್ ಬತ್ತ ಸುಮಾರು 4 ಲಕ್ಷ ಟನ್ ಕರ್ನಾಟಕದಲ್ಲಿರಬಹುದು ನಮ್ಮ ಲೆಕ್ಕದ ಪ್ರಕಾರ. ಇದರಿಂದ 2 ಲಕ್ಷ 50 ಸಾವಿರ ಟನ್ ಅಕ್ಕಿಯಾಗಬಹುದು. ಇದನ್ನು ಸಂಗ್ರಹಿಸಬೇಕಾದರೆ ರೈತರ ಸಹಕಾರ ಬೇಕು, ಅದನ್ನು ಅವರು ಕೊಡಬೇಕಾದರೆ ಸ್ವಲ್ಪ ಮಟ್ಟಿಗೆ ಬೆರೆ ಅವರಿಗೆ ಜಾಸ್ತಿ ಕೊಡಬೇಕಾಗುತ್ತದೆ. ಅವರಿಗೆ ಉತ್ಪತ್ತಿ ಮಾಡಲು ಆಗುವ ಖರ್ಚು ಕೊಡಬೇಕಾಗುವುದು. ಫರ್ಟಿಲೈಜರ್ಸ್ ಬೆರೆ ಏನಿರೆ ಎಂಬುದನ್ನು ಸಹ ನಾವು ಗಣನೆಗೆ ತೆಗೆದು ಕೊಳ್ಳಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಸರಕಾರ ತನ್ನ ನೀತಿಯನ್ನು ಕೈಬಿಟ್ಟಿರುವುದೇಕೆ ?

ಶ್ರೀ ಎಂ. ಮೈ. ಘೋರ್ಪಡೆ.—ಕೈಬಿಡುವ ಪ್ರಶ್ನೆಯೇ ಇಲ್ಲ. ಶೇಖರಣೆ ಜಾಸ್ತಿ ಮಾಡಲು ನಾವು ಪ್ರಯತ್ನ ಮಾಡಿದ್ದೇವೆ. ಈಗ ಓಪನ್ ಮಾರ್ಕೆಟ್ಟಿನಲ್ಲೆಷ್ಟು ಕೊಳ್ಳಲು ಸಾಧ್ಯ ಎಂದಕ್ಕ ನೋಡಿ ಶೇಖರಣೆ ಜಾಸ್ತಿ ಮಾಡಬೇಕೆಂಬ ಅಭಿಪ್ರಾಯವಿದೆ. ಸಹಕಾರ ಸಂಘಗಳ ಮೂಲಕ ಅಕ್ಕಿ ಶೇಖರಿಸಲು ಸಾಧ್ಯವಿದ್ದರೆ ಅದಕ್ಕೂ ಸಹ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ನಮ್ಮ ಉದ್ದೇಶ ಮತ್ತು ಕೇಂದ್ರ ಸರಕಾರದ ಉದ್ದೇಶ ಅದಷ್ಟು ಮಟ್ಟಿಗೆ ಸರ್ಪ್ಲಸ್ ತೆಗೆದುಕೊಂಡು ಕಾರ್ಡಿನ ಮೂಲಕ ಆವಶ್ಯಕತೆ ಇರುವ ಕಡೆ ಹಂಚಬೇಕೆಂಬುದು. ಆ ಉದ್ದೇಶ ಕೈಬಿಟ್ಟಿಲ್ಲ. ಬೆರೆ ಸ್ವಲ್ಪಮಟ್ಟಿಗೆ ಜಾಸ್ತಿ ಮಾಡಿದರೆ ರೈತರ ಕಡೆಯಿಂದ ಸ್ವಲ್ಪ ಮಟ್ಟಿಗೆ ಸಹಕಾರ ಸಿಕ್ಕಲು ಸಾಧ್ಯ. ಅದು ಸಿಕ್ಕಿದರೆ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ಉದ್ದೇಶ ಸಾಧಿಸಲು ಸಾಧ್ಯ. ಆ ಅಭಿಪ್ರಾಯದಿಂದ ಬೆರೆ ಜಾಸ್ತಿ ಕೊಡಬೇಕಾದ ವಿಚಾರವನ್ನು ನಾವು ಕೇಂದ್ರ ಸರಕಾರದ ಮುಂದಿಟ್ಟಿದ್ದೇವೆ. ಅದರ ಬಗ್ಗೆ ಕೇಂದ್ರದವರು ಯೋಚನೆಮಾಡುತ್ತಿದ್ದಾರೆ. ಸೂಕ್ತವಾದ ಕಾಲಕ್ಕೆ ಅದು ಒಂದು ತೀರ್ಮಾನ ಮಾಡುವುದು. ಇದು ನ್ಯಾಷನಲ್ ಪಾಲಸಿ. ಅವರಿಗೂ ಸ್ವಲ್ಪ ತೊಂದರೆ ಇರುತ್ತದೆ. ತೊಂದರೆಯಿದ್ದ ಮಾತ್ರಕ್ಕೆ ನಮ್ಮ ವಿಚಾರವನ್ನು ಅವರ ಮುಂದಿಡಬಾರದು ಎಂದೇನೂ ಇಲ್ಲ. ಯೋಚನೆಮಾಡಿ ಕೇಂದ್ರ ಸರಕಾರ ಒಂದು ತೀರ್ಮಾನ ಮಾಡಬಹುದು.

PAPERS LAID ON THE TABLE

Sri AZEEZ SAIT (Minister for Labour).—I beg to lay:

The Accounts and Audit Report of the Mysore State Road Transport Corporation for the year 1970-71;

Under sub-section (4) of Section 33 of Road Transport Corporation Act, 1950 (Central Act 64 of 1956).

MADAM SPEAKER.—The Report is laid on the Table of the House.

PRESENTATION OF PETITION

[*re: Poor People's Association, Bangalore*]

Sri T. R. SHAMANNA (Fort).—I beg to present a petition signed by the General Secretary of the Poor People's Association, Bangalore.

MADAM SPEAKER.—The petition is presented.

OBJECTIONS AGAINST THE CONSTITUTION OF ONE MAN COMMISSION.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಶಾಸನ ರಚನೆಗೆ ಸಂಬಂಧಪಟ್ಟ ವಿಷಯ ತೆಗೆದುಕೊಳ್ಳುವುದಕ್ಕೆ ಮುಂಚೆ ಒಂದು ವಿಷಯ ಪ್ರಸ್ತಾಪಿಸಬೇಕಾಗಿದೆ. ಇದು ಮುಖ್ಯವಾದ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ, ಅದು ಅಭಾವ ಪರಿಸ್ಥಿತಿ ಬಗ್ಗೆ ಸಂಬಂಧಿಸಿದ್ದು. ಆಮೇಲೆ ಅದನ್ನು ಹೇಳುವಂತಿಲ್ಲ, ಆದುದರಿಂದ ಈಗ ಹೇಳುತ್ತಿದ್ದೇನೆ. ನಿನ್ನೆ ದಿವಸ ಅಭಾವಾ ಪರಿಸ್ಥಿತಿ ನೋಡಿ ಬರಲು ಏಕೆ ಸದಸ್ಯ ಆಯೋಗ ರಚಿಸಿ ಒಂದು ಅಭಿಪ್ರಾಯಕ್ಕೆ ಬಂದಿರುವಂತೆ ತಿಳಿಯಿತು. ಅದಕ್ಕೆ ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರೂ ಒಪ್ಪಿದಂತೆ ತಿಳಿದುಬಂತು. ನನಗೆ ವೈಯಕ್ತಿಕವಾಗಿ ಶ್ರೀ ಆರ್ಮುಗಂರವರ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ತತ್ವದ ಪ್ರಶ್ನೆ ಇದು. ಪ್ರತಿಯೊಂದು ರಾಜಕೀಯ ಪಕ್ಷದ ಒಬ್ಬೊಬ್ಬ ಪ್ರತಿನಿಧಿಯಾದರೂ ಹೊಗಬೇಕೆಂದು ನಾವು ಹೇಳಿದ್ದೇವೆ. ಹಾಗೆ ಮಾಡಿದರೆ ಮಾತ್ರ ಸಮಂಜಸವಾದ ವರದಿ ಸಲ್ಲಿಸಿ ಚರ್ಚೆಮಾಡಲು ಸಾಧ್ಯ. ಈಗ ಮಾಡಿರುವ ಏರ್ಪಾಡಿನಿಂದ ಖರ್ಚು ಕಡಮೆಯಾಗಬಹುದು. ಆದರೆ ಈ ಪ್ರಶ್ನೆ ಸರಿಯಾಗಿ ಇತ್ಯರ್ಥವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಇಂದು ಕಠಿಣ ಪರಿಸ್ಥಿತಿ ಇದೆ, ಅದು ಎಲ್ಲರಿಗೂ ಗೊತ್ತಿದೆ, ಜನರು ಮತ್ತು ದನಗಳು ಸಾಯುವ ಪರಿಸ್ಥಿತಿ ಇದೆ. ಆ ಕಡೆ ವಿಭಾಗದ ಸದಸ್ಯರೂ ಕೂಡ ಇದರ ಪರಿಹಾರಕ್ಕೆ ಒತ್ತಾಯ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಇದು ಮುಗಿದುಹೋದ ಪ್ರಶ್ನೆ.

ಶ್ರೀ ಎಂ. ಎಸ್. ಕೃಷ್ಣನ್. ಅದನ್ನು ನಾನು ಒಪ್ಪುತ್ತೇನೆ. ಆದರೆ ಈಗ ಆಗಿರುವ ತೀರ್ಮಾನವನ್ನು ನಾನು ಒಪ್ಪಿಕೊಳ್ಳಲು ತಯಾರಾಗಿಲ್ಲ. ಶ್ರೀ ದೇವೇಗೌಡರು ಒಪ್ಪಿರಬಹುದು. ಅವರ ಬಗ್ಗೆ ನನಗೆ ಅಭಿಮಾನವಿದೆ. ಆದರೆ ಏಕ ಸದಸ್ಯ ಆಯೋಗ ಕಳಿಸುವುದು ಸರಿಯಲ್ಲ, ಇದು ರಾಜಕೀಯ ನಾಟಕ, ಇದನ್ನು ಒಪ್ಪುವುದಕ್ಕೆ ನಾನು ತಯಾರಾಗಿಲ್ಲ.

Sri D. DEVARAJ URS (Chief Minister).—I am sorry the member is speaking something other than the matter which is under discussion of the House. The Hon'ble Member has all of a sudden

and abruptly raises a matter which has been given a quietus and which has been accepted by this House yesterday. He is simply telling what has happened and what has not happened yesterday

ಶ್ರೀ ವಿ. ಎನ್. ಪಾಟೀಲ್.—ನಿಕ ನದಿನ್ಯ ಆಯೋಗ ಕಳಿಸುವುದು ಸಾಧುಬಾದುದಲ್ಲ.

MADAM SPEAKER.—Were you not present in the House yesterday ?

Sri D. DEVARAJ URS.—The house is not responsible if Hon'ble Members are not present during the discussion of a particular subject.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತೀರ್ಮಾನ ಮಾಡಿರುವುದು ತತ್ವಕ್ಕೆ ವಿರುದ್ಧವಾದುದು. ಅದನ್ನು ಒಪ್ಪಲು ನಾನು ತಯಾರಾಗಿಲ್ಲ. ಪ್ರತಿಯೊಂದು ಪಕ್ಷದ ಪ್ರತಿನಿಧಿಯನ್ನೂ ಕಳುಹಿಸಬೇಕಾಗಿತ್ತು. ಹಿಂದಿನ ದಿವಸ ಮಾತನಾಡುವಾಗ ಜಾಸ್ತಿ ಜನರನ್ನು ಕಳುಹಿಸುವುದು ಬೇಡವೆಂದು ಮುಖ್ಯಮಂತ್ರಿಗಳು ಹೇಳಿದರು, ಮೊದಲು 5 ಜನ ಸಾಕೆಂದರು, ನಂತರ 10 ಜನವು ಸಾಕೆಂದರ್ತು, ಹೀಗೆ ಅವು ಬದಲಾವಣೆಯಾಯ್ತು. ಹಾಗಿರುವಾಗ ಹೆಚ್ಚು ಜನರು ಹೋಗಬೇಕೆಂದ್ತು ತೀರ್ಮಾನ ವಾಗಿದ್ದುದನ್ನು ಬದಲಾಯಿಸಿ ಒಬ್ಬರು ಹೋದರೆ ಸಾಕೆಂದು ಗೊತ್ತುಮಾಡಿರುವುದು ಸರಿಯಲ್ಲ. ಈ ನೀತಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಇಂದು ಪರಿಸ್ಥಿತಿ ಉತ್ತಮವಾಗಬೇಕು, ಅಭಾವದ ವಿಚಾರದ ಪ್ರಶ್ನೆ ಪರಿಹಾರವಾಗಬೇಕು, ಸಮಂಜಸವಾದ ವರದಿ ಬರಬೇಕು ಎಂದು ಈ ಸಭೆಯು ಗಮನಸೆಳೆದಿರುವಾಗ ಈ ರೀತಿ ಮಾಡುವುದು ಸರಿಯಲ್ಲ ; ನ್ಯಾಯವಲ್ಲ, ನಾವಂತೂ ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಆದುದರಿಂದ ಈ ವಿಚಾರವನ್ನು ಪುನರ್ಪರಿಶೀಲನೆ ಮಾಡಬೇಕು ಎಂದು ನಾನು ವಿನಯದಿಂದ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಏನು ಹೇಳುವರೋ ಕೇಳಬೇಕಾಗಿದೆ.

ಶ್ರೀ ವಿ. ಎನ್. ಪಾಟೀಲ್.—ಎರಡು ವಿಷಯ ನಾನೂ ಸಹ ಗಮನಕ್ಕೆ ತ್ತರಬೇಕಾಗಿದೆ. ಆಮೇಲೆ ಸರಕಾರ ಉತ್ತರ ಹೇಳಬಹುದು, ಜನರ ಕಣ್ಣಲ್ಲಿ ನೀರು ಬರುವ ಪರಿಸ್ಥಿತಿ ಅಲ್ಲಿ ಇದೆ. ಮಾನ್ಯ ಅಧ್ಯಕ್ಷರೇ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬಂದು ವಿಷಯವನ್ನು ತರಬಯಸುತ್ತೇನೆ....

ಅಧ್ಯಕ್ಷರು.—ಮಾನ್ಯ ನದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ನಾವೇನೂ ನಮ್ಮ ಅಭಿಪ್ರಾಯ...

ಅಧ್ಯಕರು.—ನೆನ್ನೆಯಲ್ಲಾ ಈ ವಿಚಾರದಲ್ಲ ವಿಪುಲವಾದ ಚರ್ಚೆ ನಡೆದು ಅತ್ತ ಕಡೆಯಲ್ಲ ರತಕ್ಕ ನದಸ್ಯರೂ ಮತ್ತು ಇತ್ತ ಕಡೆಯಲ್ಲಿರತಕ್ಕ ನದಸ್ಯರೂ ಎಲ್ಲರೂ ಒಂದು ತೀರ್ಮಾನಕ್ಕೆ ಬಂದು ಆ ತೀರ್ಮಾನದಂತೆ ಒನ್ ಮ್ಯಾನ್ ಕಮಿಷನ್‌ನ್ನು ನೇಮಕ ಮಾಡಿದ್ದಾಗಿದೆ. ಬಹುಶಃ ಅವರು ಈ ದಿವಸ ಆಗಲೇ ಹೋಗಿರಬೇಕು, ಇಲ್ಲವೇ ಹೊರಡುವುದರಲ್ಲಿದ್ದಾರೆಂದು ನನಗನಿಸುತ್ತಿದೆ. ಆದುದರಿಂದ ದಯವಿಟ್ಟು ಈ ವಿಚಾರವನ್ನು ಮತ್ತೆ ಯಾರೂ ಎತ್ತಬೇಡಿ. It is closed matter.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀ ಆಮ್ಮುಗಂ ಅವರು ಹೋಗುವುದರಲ್ಲ ನನ್ನ ಅಭ್ಯಂತರ ವೇನು ಇರುವುದಿಲ್ಲ. ಆದರೆ ಇದರಲ್ಲಿ ಯಾವ ಒಂದು ತತ್ವವೂ ಇಲ್ಲದಂತಾಗಿದೆ. — ನಾನು ಮೊದಲು ಹೇಳಿದ್ದು ಒಂದೊಂದು ಪಾರ್ಟಿಯಿಂದ ಒಬ್ಬೊಬ್ಬ ನದಸ್ಯರನ್ನು ಆ ಸ್ಥಳಕ್ಕೆ ಕಳುಹಿಸಬೇಕೆಂದು ಹೇಳಿದ್ದೇವು. ಆದರೆ ಈ ದಿವಸ ಒಬ್ಬರನ್ನು ಮಾತ್ರ ಕಳುಹಿಸಿದ್ದಾರೆ. ಅವರು ಅಲ್ಲಯ ಜನರಿಗೆ ಇಂಗ್ಲೀಷಿನಲ್ಲಿ ಪ್ರಶ್ನೆಗಳನ್ನು ಕೇಳಬೇಕೇ ಆಥವಾ ತಮಿಳಿನಲ್ಲಿ ಪ್ರಶ್ನೆಗಳನ್ನು ಕೇಳಬೇಕೆಂಬ ಆ ವಿಷಯಗಳ ಬಗ್ಗೆ ನಾನೀಗ ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಒನ್ ಮ್ಯಾನ್ ಕಮೀಷನ್ ಕಳುಸುವುದಕ್ಕೆ ಒಪ್ಪಿಕೊಂಡರು ಎಂದು ಹೇಳುತ್ತಿದ್ದಾರೆ. ಇರಬಹುದು. ಆದರೆ ಅದರಲ್ಲಿ ಇತ್ತಪಾಲನೆ ತಪ್ಪಿದಂತಾಗಿದೆ. ಆದುದರಿಂದ ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ಪುನರ್ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಒತಾಯ ಮಾಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸ್ಪೀಕರ್ ಅವರು ನೆನ್ನೆಯ ದಿವಸ ಈ ಸಭೆಯಲ್ಲಿ ಕೇವಲರು ಒಪ್ಪಿದರು ಎಂದು ಹೇಳಬಹುದು. ಇರಬಹುದು. ಈ ದಿವಸ ಸರ್ಕಾರದವರು ನೇಮಕ ಮಾಡಿರತಕ್ಕ ಆ ಓನ್ ಕಮಿಷನ್ ಏನಿದೆ ಅದನ್ನು ನೋಡಿದರೆ ಸರ್ಕಾರದವರು ಮಾಡಿರ ತಕ್ಕ ಲೋಪದೋಷಗಳನ್ನು ಮುಚ್ಚಿಹಾಕುವುದಕ್ಕೆನೋ ಹೀಗೆ ಮಾಡಿದ್ದಾರೆಂಬ ಭಾವನೆ ಬರ ಬಹುದು ಅನ್ನತಕ್ಕ ರೀತಿಯಲ್ಲಿದೆ ಇದು. ಅಲ್ಲಿ ದಿನಂಪ್ರತಿ ಜನರು ಸಾಯುತ್ತಿದ್ದಾರೆಂದು ನಮಗೆ ತೆಲಗ್ರಾಂಗಳು ಬರುತ್ತಿವೆ. ಆದಾಗ್ಯೂ ನಾವು ಇಲ್ಲಿ ಅವರ ಬಗ್ಗೆ ಒಂದು ಸೂಕ್ತ ಕ್ರಮ ಕೈಗೊಳ್ಳುವುದಕ್ಕಾಗಲಿಲ್ಲ ಎಂದರೆ ಬಹಳ ವ್ಯಸನಕರವಾದ ವಿಷಯ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

Sri D. DEVARAJ URS.—Again I submit there is no point in raising it again.

Sri V. N. PATIL.—I must congratulate the Chief Minister for having accepted the demand of the Opposition for constituting a Committee.

ಅಧ್ಯಕ್ಷರೇ ನಾನು ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥಿಸಿಕೊಳ್ಳುವುದೇನೆಂದರೆ—ಇದು ಬಹಳ ಗಂಭೀರವಾದ ಪ್ರಶ್ನೆ—ಅಲ್ಲಿ ಜನರು ಹೊಟ್ಟೆಗಿಲ್ಲದೆ ಅನ್ನವಿಲ್ಲದೆ ಸಾಯುತ್ತಿದ್ದಾರೆ. ಇಂಥಾ ವಿಚಾರದಲ್ಲಿ ನಾವು ರಾಜಕೀಯ ಬೆಳೆಸುವುದು ಬೇಡ. ಈ ಪ್ರಶ್ನೆಗೆ ಇತ್ತಕಡೆ ಸದಸ್ಯರು ಅತ್ತ ಕಡೆ ಸದಸ್ಯರು ಎಂಬ ತಾರತಮ್ಯ ಬೇಡ. ಆದರೆ ಒಂದು ವಿಷಾದಪೂರಿತವಾದ ವಿಷಯ ಎಂದರೆ ಆ ಸಮಿತಿಯಲ್ಲಿ ಆ ಡ್ರಾಫ್ ಏರಿಯಕ್ಕೆ ಸಂಬಂಧಪಟ್ಟವರು ಯಾರೂ ಇರುವುದು ಬೇಡವೇ ! ಅದರಲ್ಲಿ ಒಬ್ಬರನ್ನಾದರೂ ಹಾಕುವುದು ಬೇಡವೇ

Sri K. H. PATIL (Minister for Agriculture and Forests).—I can understand the feelings of the Hon'ble Member Sri V. N. Patil. But unfortunately Sri Patil being a very senior member of the House wants to congratulate the Chief Minister. But this is not the forum. There are so many forums where he can congratulate him. When the matter is already ended there is no point in bringing it again.

(Sri V. N. Patil and M. S. Krishnan stood up to say something).

Sri K. H. PATIL.—I am on a point of order. When both the sides of the House accepted the suggestion, is it worthwhile that he should again and again go on deciding the matter ?

ಶ್ರೀ ಎಂ. ಎಸ್. ಕೃಷ್ಣನ್.—ಅವರೇನು ಈ ವಿಚಾರ ಎಂಡೆಡ್ ಎಂದು ಹೇಳುತ್ತಾರೆ. ಅದನ್ನು ನಾನು ಒಪ್ಪಿರುವುದಿಲ್ಲ. ಅದು ಸರಿಯಾದ್ದು ಅಲ್ಲ.

ಅಧ್ಯಕ್ಷರು.—ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ. It is I that should say. The matter has ended and closed. This is over, therefore you need not raise it again. ನೀವು ಹೇಳುವುದರ ಮೇರೆ ನಾನು ಏನು ಹೇಳುತ್ತೇನೋ ಅದು ಫೈನಲ್ ಈ ವಿಚಾರದಲ್ಲಿ ಆಗಲೇ ತೀರ್ಮಾನವಾಗಿ ವಿಷಯ ಮುಕ್ತಾಯವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ಇವನ್ನು ಮಾನ್ಯ ಮುಖ್ಯಮಂತ್ರಿಗಳು ಪುನರ್ ಪರಿಶೀಲನೆ ಮಾಡುವುದಿಲ್ಲವೆಂದು ಹೇಳುತ್ತಾರೋ ಅವರು ಈವಿಚಾರದಲ್ಲಿ ಒಂದು ಸಮಂಜಸವಾದ ತೀರ್ಮಾನವನ್ನು ಕೊಟ್ಟಿಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ತಮ್ಮ ಬಿಲ್ಲನ್ನು ಮೂವ್ ಮಾಡಬಹುದು.

(ಶ್ರೀ ಎಂ. ಎಸ್. ಕೃಷ್ಣನ್ ಅವರು ಮಾತನಾಡುತ್ತಲೇ ಇದ್ದರು)

Sri B. BASAVALINGAPPA.—Sir I rise do intruduce the.....

ಶ್ರೀ ಪಿ. ಎನ್. ಪಾಟೀಲ್.—ತಾವು ಹೀಗೆಲ್ಲಾ ಮಾಡುವುದಾದರೆ ನಮ್ಮ ವಿಷಾದವನ್ನು ವ್ಯಕ್ತಪಡಿಸಲು ವಾಕ್‌ಔಟ್ ಮಾಡಬೇಕಾಗುತ್ತದೆ.....

ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಕಕ್ಕಿಲಾಯ, ಶ್ರೀ ಪಿ. ಎನ್. ಪಾಟೀಲ್ ಇವರೆಲ್ಲಾ (ಸಭೆಯಿಂದ ಹೊರಗಡೆಗೆ ಹೋದರು).

[*The members withdrew*]

(i) Mysore Ownership Flats (Regulation of the promotion of Construction, Sale, Management and Transfer) Bill, 1972.

(ii) The Mysore Apartment Ownership Bill, 1972.

(iii) The Mysore Acquisition of Lands (For Grant of House Sites) Bill, 1972—Introduction.

Sri B. BASAVALINGAPPA (Minister for Municipal Administration).—I beg to introduce the following Bills:

(*a*) The Mysore Ownership Flats (Regulation of the Promotion* of Construction, Sale, Management and Transfer) Bill, 1972;

(*b*) The Mysore Apartment Ownership Bill, 1972

(*c*) The Mysore Acquisition of Lands (For Grant of House Sites) Bill, 1972.*

Madam SPEAKER.—The Bills are introduced.

Statement of the Chief Minister

re:—Constitution of One-Man Commission

ಶ್ರೀ ಸಿ. ಬೈರೇಗೌಡ.—ಸರ್ಕಾರದವರು ಆ ಸಮಿತಿಯನ್ನು ನಿರ್ಮಾಣ ಮಾಡುವುದಕ್ಕೆ ಕಾರಣ ಏನು.....

ಅಧ್ಯಕ್ಷರು.—ನೀವೂ ಕೂಡ ಈಗ ವಾಕ್‌ಔಟ್ ಮಾಡಬೇಕೆಂದು ನಿಂತಿದ್ದೀರಾ ?

ಶ್ರೀ ಸಿ. ಬೈರೇಗೌಡ.—ಈ ವಿಚಾರದಲ್ಲಿ ನನ್ನ ತೀವ್ರ ವಿರೋಧವಿದೆ.

(ಸಭೆಯಿಂದ ಮಾನ್ಯ ಸದಸ್ಯರಾದ ಬೈರೇಗೌಡರೂ ಹೊರಗಡೆಗೆ ಹೋದರು)

ಶ್ರೀ ಡಿ ದೇವರಾಜ ಅರಸ್.—ಈಗತಾನೆ ಸದನದಲ್ಲಿ ಇದ್ದ ಮಾನ್ಯ ಸದಸ್ಯರುಗಳು ಏನು ವಾಕ್‌ಔಟನ್ನು ಮಾಡಿದರು ಅದು ಸಭಾಘನತೆಗೆ ಯಾವ ರೀತಿಯಿಂದಲೂ ಸರಿಯಾದುದಲ್ಲ. ಅವರು ಸಭೆಗೆ ಅಗೌರವ ತರತಕ್ಕ ರೀತಿಯಲ್ಲಿ ನಡೆದುಕೊಂಡಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರೂ ಮತ್ತು ಇತರರೂ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಏನು ಉಂಟಾಗಿದೆ ಅದರ ಪರಿಶೀಲನೆಗಾಗಿ ಒಂದು ಸಮಿತಿಯನ್ನು ನೇಮಿಸಬೇಕು ಎಂದು ಹೇಳಿದನಂತರ ಸರ್ಕಾರದವರೂ ಕೂಡ ವಿಷಯವನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡುವುದರ ಬಗ್ಗೆ ಸರ್ಕಾರದ ಅಭ್ಯಂತರವೇನೂ ಇರುವುದಿಲ್ಲ ಎಂದು ಹೇಳಿದ ನಂತರ ಅದರ ಬಗ್ಗೆ ಪೊಲೀಸ್ ಒಂದು ಸಮಿತಿಯನ್ನು ಮಾಡಿದ್ದಾಯಿತು. ಅದನ್ನು ಸರಿಯಾಗಿಲ್ಲ ಎಂದು ಹೇಳಿದ್ದರಿಂದ ಇನ್ನೊಂದು ಸಮಿತಿಯನ್ನು ನೇಮಕ ಮಾಡಿದ್ದಾಯಿತು. ಅದೂ ಸರಿಯಾಗಿಲ್ಲವೆಂದು ಹೇಳಿದ್ದಕ್ಕೆ ಸಭೆಯಲ್ಲೇ ನನ್ನೆಯ ದಿವಸ ಒಂದು ತೀರ್ಮಾನ

*The Three Bills introduced are reproduced as Annexure to the day's proceedings.